ಸಿ.ಸಿ. **2471/2022**

ಪಿ.ಡಬ್ಲ್ಯೂ-1

ದಿನಾಕಃ 27.03.2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಕೆ.ಎಮ್ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆ. ನಮ್ಮ ಕುಟುಂಬದಲ್ಲಿ ನಾಲ್ಕು ಜನ ವಾಸವಿರುತ್ತೇವೆ. ನನಗೆ ಇಬ್ಬರು ಮಕ್ಕಳು. ಸದರಿಯವರಲ್ಲಿ ಒಬ್ಬರು 10 ನೇ ತರಗತಿ ಓದುತ್ತಿದ್ದು, ಇನ್ನೊಬ್ಬಳು ದ್ವಿತೀಯ ಪಿ.ಯು.ಸಿ. 2016 ರಲ್ಲಿ ನನ್ನ ಒಬ್ಬ ಮಗಳ ಮದುವೆ ಮಾಡಿರುತ್ತೇನೆ. ನನಗೆ 3 ಎಕರೆ ಕುಷ್ಕಿ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ರಾಗಿ, ಜೋಳ ಬೆಳೆಯುತ್ತೇನೆ. 6 ತಿಂಗಳಿಗೊಮ್ಮೆ 75 ಕ್ವಿಂಟಲ್ ಬೆಳೆ ಬೆಳೆಯುತ್ತೇನೆ. ಸದರಿ ಬಗ್ಗೆ ಯಾವುದಾದರೂ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಲು ನನಗೆ ತೊಂದರೆ ಇರುವುದಿಲ್ಲ. ಅಂದಾಜು ವರ್ಷಕ್ಕೆ ಖರ್ಚನ್ನು ಹೊರತುಪಡಿಸಿ ಸುಮಾರು 1 ವರೆ ಲಕ್ಷ ಸಂಪಾದಿಸುತ್ತೇನೆ. ತಿಂಗಳಿಗೆ ಮನೆ ಖರ್ಚು ಸುಮಾರು 3 ಸಾವಿರ ಆಗಬಹುದು. ಒಂದು ವರ್ಷಕ್ಕೆ 60 ರಿಂದ 70 ಸಾವಿರ ಖರ್ಚು ಬರುತ್ತದೆ. ವ್ಯವಸಾಯಕ್ಕೆ ಅಂದಾಜು 60 ಸಾವಿರ ಖರ್ಚು ಮಾಡುತ್ತೇನೆ.

ಸರ್ಕಾರ ದಿಂದ ನನಗೆ ಬಿ.ಬಿ.ಎಲ್ ಪಡಿತರ ಚೀಟಿ ನೀಡಿರುತ್ತಾರೆ. ಸದರಿ ಪಡಿತರ ಚೀಟಿಯನ್ನು ವಾರ್ಷಿಕ ಆಧಾಯ 5 ಲಕ್ಷಕ್ಕಿಂತ ಕಡಿಮೆ ಇದ್ದರೆ ಮಾತ್ರ ನೀಡುತ್ತಾರೆಂದರೆ ಸರಿ. ನಾನು ಯಾವುದೇ ಲೇವಾ ದೇವಿ ವ್ಯವಹಾರ ಮಾಡುವುದಿಲ್ಲ. ನನ್ನ ಹಾಗೂ ಆರೋಪಿ ನಡುವೆ ಯಾವುದೇ ಹಣದ ವ್ಯವಹಾರ ನಡೆದಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯ ತಂದೆ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿ ಆಗಿರುತ್ತದೆಂದರೆ ಸರಿ. ಅವರಿಗೆ ಎಷ್ಟು ಸಂಬಳ ಬರುತ್ತದೆಂದು ನನಗೆ ಗೊತ್ತಿಲ್ಲ. ಸದರಿಯವರಿಗೆ ತಿಂಗಳಿಗೆ 26,000/- ಸಂಬಳ ಬರುತ್ತದೆಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು